# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 254 (388) |
| 2. ಮಾನ್ಯ ಸದಸ್ಯರ ಹೆಸರು | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | 12/12/2018 |
| 4. ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳಾವವು: ಈ ಯೋಜನೆಗಳಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ಎಷ್ಟು ಹಣ ಖರ್ಚು ಮಾಡಲಾಗಿದೆ : | ಕಾರ್ಮಿಕ ಇಲಾಖೆ ಹಾಗೂ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದ್ದು ಸದರಿ ಯೋಜನೆಗಳಡಿ ನೀಡಲಾಗುತ್ತಿರುವ ಸೌಲಭ್ಯಗಳು, ಯೋಜನೆಗಳಿಗೆ ಒದಗಿಸಲಾದ ಹಣ ಹಾಗೂ ಖರ್ಚಾದ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ :**<br>• ಅಸಂಘಟಿತ ವಲಯಕ್ಕೆ ಸೇರಿದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ 15 ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ಸೌಲಭ್ಯಗಳ ವಿವರವನ್ನು **ಅನುಬಂಧ -1** ರಲ್ಲಿ ಒದಗಿಸಿದೆ.<br>• ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಫಲಾನುಭವಿಗಳಿಗೆ ನೀಡಲಾಗುವ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಅನುದಾನ ಪಡೆಯಲಾಗುವುದಿಲ್ಲ. ಆದರೆ, ಮಂಡಳಿಯು ಸುಂಕದ ರೂಪದಲ್ಲಿ ಸಂಗ್ರಹಿಸುವ ಮೊತ್ತದಿಂದ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>• ಕಳೆದ ಮೂರು ವರ್ಷಗಳಲ್ಲಿ ಈ ಮಂಡಳಿಯಿಂದ ಫಲಾನುಭವಿಗಳಿಗೆ ವಿವಿಧ ಯೋಜನೆಗಳಡಿ ನೀಡಲಾದ ಸೌಲಭ್ಯಗಳ ವಿವರವನ್ನು **ಅನುಬಂಧ-02** ರಲ್ಲಿ ಒದಗಿಸಿದೆ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ :-**<br>ಈ ಮಂಡಳಿಯ ಮೂಲಕ ಸರ್ಕಾರವು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಈ ಕೆಳಕಂಡ 03 ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.<br>(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಈ ಯೋಜನೆಯಡಿ ಅಸಂಘಟಿತ ವಲಯದ ಕಾರ್ಮಿಕರೆಂದು ಗುರುತಿಸಲ್ಪಟ್ಟ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ |

ಅಪಘಾತ ಪರಿಹಾರ ಸೌಲಭ್ಯ ಒದಗಿಸಲಾಗುತ್ತಿದ್ದು, 2012-13ನೇ ಸಾಲಿನಿಂದ ಜಾರಿಗೊಳಿಸುತ್ತಿದೆ.

**ಈ ಯೋಜನೆಯಡಿಯಲ್ಲಿ ಕಳೆದ 03 ವರ್ಷಗಳಲ್ಲಿ ಒದಗಿಸಿರುವ ಅನುದಾನ ಹಾಗೂ ಖರ್ಚಾಗಿರುವ ಮೊತ್ತದ ವಿವರ ಈ ಕೆಳಕಂಡಂತೆ ಇರುತ್ತದೆ.**

| ವರ್ಷ | ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ) | ಖರ್ಚು (ಲಕ್ಷ ರೂ. ಗಳಲ್ಲಿ) |
|---|---|---|
| 2016-17 | 850 | 234.93 |
| 2017-18 | 1750 | 1406.35 |
| 2018-19 | 1750 | 108.49 |

**(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-** 2017-18ನೇ ಸಾಲಿನಲ್ಲಿ ಪ್ರಾರಂಭಿಸಲಾದ ಈ ಯೋಜನೆಯಡಿ 05 ವಲಯಗಳ ಅಸಂಘಟಿತ ಕಾರ್ಮಿಕರಾದ ಚಿಂದಿ ಆಯುವವರು, ಗೃಹಕಾರ್ಮಿಕರು, ಹಮಾಲಿಗಳು, ಟೈಲರ್‌ಗಳು ಹಾಗೂ ಮೆಕ್ಯಾನಿಕ್‌ಗಳನ್ನು ನೊಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲು ಕ್ರಮಕೈಗೊಳ್ಳಲಾಗಿದೆ.

ಈ ಯೋಜನೆಯಡಿಯಲ್ಲಿ ಒದಗಿಸಿರುವ ಅನುದಾನ ಹಾಗೂ ಖರ್ಚಾಗಿರುವ ಮೊತ್ತದ ವಿವರ ಈ ಕೆಳಕಂಡಂತೆ ಇರುತ್ತದೆ.

| ವರ್ಷ | ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ) | ಖರ್ಚು (ಲಕ್ಷ ರೂ.ಗಳಲ್ಲಿ) |
|---|---|---|
| 2017-18 | 1000 | 0.93 |
| 2018-19 | 2500 | 105.17 |

**(3) ಎನ್.ಪಿ.ಎಸ್.ಲೈಟ್-ಸ್ವಾವಲಂಭನ್ ಯೋಜನೆ:-**

- ಅಸಂಘಟಿತ ಕಾರ್ಮಿಕರಿಗೆ ವೃದ್ಧಾಪ್ಯದ ಸಮಯದಲ್ಲಿ ಆರ್ಥಿಕ ಭದ್ರತೆ ಒದಗಿಸಿ, ಪಿಂಚಣಿ ಸೌಲಭ್ಯದ ಲಾಭ ಒದಗಿಸುವ ಉದ್ದೇಶದಿಂದ ಭಾರತ ಸರ್ಕಾರದ ಆರ್ಥಿಕ ಸಚಿವಾಲಯದವರು "ಸ್ವಾವಲಂಭನ್" ಯೋಜನೆಯನ್ನು 2010-11 ರಿಂದ ಪ್ರಾರಂಭಿಸಿದ್ದು, ಕೇಂದ್ರ ಸರ್ಕಾರದ ನಿರ್ಣಯದಂತೆ, ದಿನಾಂಕ:01-04-2015 ರಿಂದ ಅನ್ವಯವಾಗುವಂತೆ ಸ್ಥಗಿತಗೊಳಿಸಲಾಗಿದೆ. ಆದರೂ, ಯೋಜನೆಯಡಿ ನವೀಕರಿಸಲ್ಪಟ್ಟ ವಂತಿಕೆದಾರರಿಗೆ ರಾಜ್ಯ ಸರ್ಕಾರವು 2016-17ನೇ ಸಾಲಿನವರೆಗೆ ಸಮಾನಾಂತರ ವಂತಿಕೆಯನ್ನು ಪಾವತಿಸಿದೆ.

ಈ ಯೋಜನೆಯಡಿಯಲ್ಲಿ ಒದಗಿಸಿರುವ ಅನುದಾನ ಹಾಗೂ ಖರ್ಚಾಗಿರುವ ಮೊತ್ತದ ವಿವರ ಈ ಕೆಳಕಂಡಂತೆ ಇರುತ್ತದೆ.

<table>
<tr><td></td><td></td><td>
<table>
<tr><th>ವರ್ಷ</th><th>ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ)</th><th>ಖರ್ಚು (ಲಕ್ಷ ರೂ.ಗಳಲ್ಲಿ)</th></tr>
<tr><td>2016–17</td><td>100</td><td>234.45</td></tr>
<tr><td>2017–18</td><td>100</td><td>220.42</td></tr>
<tr><td>2018–19</td><td>50</td><td>21.55</td></tr>
</table>
</td></tr>
<tr><td>ಆ)</td><td>ಅಸಂಘಟಿತ ವಲಯದ ಕಾರ್ಮಿಕರ ವ್ಯಾಪ್ತಿಯಲ್ಲಿ ಬರುವ ಕಾರ್ಮಿಕ ವರ್ಗ ಯಾವುದು?</td><td>ಕರ್ನಾಟಕ ರಾಜ್ಯ ಸರ್ಕಾರವು 43 ವರ್ಗಗಳ ಅಸಂಘಟಿತ ಕಾರ್ಮಿಕರೆಂದು ಗುರುತಿಸಿದ್ದು, ಪಟ್ಟಿಯನ್ನು ಅನುಬಂಧ–3ರಲ್ಲಿ ಒದಗಿಸಿದೆ.<br>ಇದಲ್ಲದೆ, ಹೆಚ್ಚುವರಿಯಾಗಿ 101 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಸದರಿ ಪಟ್ಟಿಗೆ ಸೇರಿಸಿ ಆದೇಶ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪಟ್ಟಿಯನ್ನು ಅನುಬಂಧ–4 ರಲ್ಲಿ ಒದಗಿಸಿದೆ.</td></tr>
</table>

**ಕಾಇ 426 ಎಲ್ಇಟಿ 2018**

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು

## ಅನುಬಂಧ-01

## ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ **60 ವರ್ಷ ಪೂರೈಸಿದ ಫಲಾನುಭವಿಗೆ** ಮಾಸಿಕ ರೂ.1,000/
2. **ದುರ್ಬಲತೆ ಪಿಂಚಣಿ:** ಫಲಾನುಭವಿಗೆ ಖಾಯಿಲೆಗಳಿಂದ ಹಾಗೂ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.1,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ. **2,00,000/-**ದವರೆಗೆ ಅನುಗ್ರಹ ರಾಶಿ ಸಹಾಯಧನ.
3. **ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) :** ರೂ.20,000/-ವರೆಗೆ
4. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ):** ರೂ.2,00,000/-ದವರೆಗೆ ಮುಂಗಡ ಸೌಲಭ್ಯ
5. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. **30,000/-** ಮತ್ತು ಗಂಡು ಮಗುವಿನ ಜನನಕ್ಕೆ **ರೂ.20,000/-**
6. **ಅಂತ್ಯಕ್ರಿಯೆ ವೆಚ್ಚ :** **ರೂ.4,000/-** ಹಾಗೂ ಎಕ್ಸ್‌ಗ್ರೇಷಿಯಾ **ರೂ.50,000/-**ಸಹಾಯಧನ
7. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**
   i) 1, 2 ಹಾಗೂ 3ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ರೂ. **2,000/-**
   ii) 4, 5 ಹಾಗೂ 6ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ರೂ. **3,000/-**
   iii) 7 ಹಾಗೂ 8ನೇ ತರಗತಿ ಉತ್ತೀರ್ಣರಾದವರಿಗೆ **ರೂ. 4,000/-**
   iv) 9, 10 ನೇ ತರಗತಿ ಹಾಗೂ ಪ್ರಥಮ ಪಿಯುಸಿಉತ್ತೀರ್ಣರಾದವರಿಗೆ **6,000/-**
   v) ದ್ವಿತೀಯ ಪಿ.ಯು.ಸಿ ಉತ್ತೀರ್ಣರಾದವರಿಗೆ ರೂ. **8,000/-**
   vi) ಐಟಿಐ ಮತ್ತು ಡಿಪ್ಲೋಮಾ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ರೂ. **7,000/-**
   vii) ಪದವಿ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ರೂ. **10,000/-**
   viii) ಸ್ನಾತಕೋತ್ತರ ಪದವಿ ಸೇರ್ಪಡೆಗೆ ರೂ. **20,000/-** ಹಾಗೂ ಪ್ರತಿ ವರ್ಷ **ರೂ.10,000/-**ಗಳಂತೆ (ಎರಡು ವರ್ಷಗಳಿಗೆ)
   ix) ಇಂಜಿನಿಯರಿಂಗ್ ಕೋರ್ಸ್‌ಗೆ ಸೇರ್ಪಡೆಗೆ **ರೂ.25,000/-** ಹಾಗೂ ಪ್ರತಿ ವರ್ಷ ತೇರ್ಗಡೆಗೆ **ರೂ.20,000/-**
   x) ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ **ರೂ.30,000/-** ಹಾಗೂ ಪ್ರತಿ ವರ್ಷ ತೇರ್ಗಡೆಗೆ **ರೂ.25,000/-**
   xi) ಪಿಹೆಚ್‌ಡಿ ಕೋರ್ಸ್‌ಗೆ ಪ್ರತಿ ವರ್ಷಕ್ಕೆ **ರೂ.20,000/-** (ಗರಿಷ್ಠ ಎರಡು ವರ್ಷಗಳು) ಮತ್ತು ಪಿಹೆಚ್‌ಡಿ ಪ್ರಬಂಧ ಸ್ವೀಕಾರದ ನಂತರ ಹೆಚ್ಚುವರಿಯಾಗಿ **ರೂ.20,000/-**

**ಪ್ರತಿಭಾವಂತ ಮಕ್ಕಳಿಗಾಗಿ:**

(a) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ತರಗತಿಯಲ್ಲಿ ಶೇ.75 ಅಂಕ ಪಡೆದವರಿಗೆ **ರೂ.5,000/-**

(b) ಪಿಯುಸಿ ಅಥವಾ ತತ್ಸಮಾನ ತರಗತಿಯಲ್ಲಿ ಶೇ.75 ಅಂಕ ಪಡೆದವರಿಗೆ **ರೂ.7,000/-**

(c) ಪದವಿ ಅಥವಾ ತತ್ಸಮಾನ ಕೋರ್ಸ್‌ನಲ್ಲಿ ಶೇ.75 ಅಂಕ ಪಡೆದವರಿಗೆ **ರೂ.10,000/-**

(d) ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಕೋರ್ಸ್‌ನಲ್ಲಿ ಶೇ.75 ಅಂಕ ಪಡೆದವರಿಗೆ **ರೂ.15,000/-**

8. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಬಿತರಿಗೆ **ರೂ.300/-** ರಿಂದ **ರೂ.10,000/-ವರೆಗೆ**

9. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ. 2,00,000/-** ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**

10. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**

11. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ **ರೂ.50,000/-**

12. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ):** ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್

13. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

14. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ

15. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000/-ಗಳ ಸಹಾಯಧನ

# ಅನುಬಂಧ-2

## 2015-16 ರಿಂದ 2017-18 ಅವಧಿಯಲ್ಲಿ ವಿತರಿಸಲಾದ ಸೌಲಭ್ಯಗಳ ವರ್ಷವಾರು ವಿವರ

| ಸೌಲಭ್ಯಗಳ ವಿವರ | 2015-16 | | 2016-17 | | 2017-18 | | ಒಟ್ಟು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಶೈಕ್ಷಣಿಕ ಧನಸಹಾಯ | 40,048 | 177,492,706 | 80,412 | 373,781,879 | 79,256 | 384,717,037 | 199,716 | 935,991,622 |
| ಮದುವೆ ಧನಸಹಾಯ | 3,638 | 179,340,000 | 8,488 | 424,200,000 | 9,452 | 472,600,000 | 21,578 | 1,076,140,000 |
| ಅಂತ್ಯ ಸಂಸ್ಕಾರಕ್ಕೆ ವೆಚ್ಚ | 990 | 52,898,367 | 1854 | 100,440,252 | 2,178 | 117,395,000 | 5,022 | 270,733,619 |
| ಪ್ರಮುಖ ವೈದ್ಯಕೀಯ | 508 | 16,171,872 | 704 | 17,573,710 | 696 | 20,421,791 | 1908 | 54,167,373 |
| ಅಪಘಾತದಿಂದ ಮರಣ/ಶಾಶ್ವತ ದುರ್ಬಲತೆ ಪರಿಹಾರ ಧನ | 34 | 3,180,012 | 51 | 7,094,000 | 56 | 9,948,000 | 141 | 30,496,024 |
| ಹೆರಿಗೆ ಧನಸಹಾಯ | 350 | 5,235,000 | 543 | 8,136,000 | 467 | 7,005,000 | 1,360 | 20,222,012 |
| ವೈದ್ಯಕೀಯ ಚಿಕಿತ್ಸೆಗೆ ನೀಡಿದ ವೆಚ್ಚ | 30 | 46,451 | 37 | 82,891 | 44 | 280,500 | 111 | 409,842 |
| ಉಪಕರಣ ಖರೀದಿಗೆ ಸಾಲ | 5 | 25,000 | 1 | 5000 | 0 | 0 | 6 | 30,000 |
| ಪಿಂಚಣಿ ಸೌಲಭ್ಯ | 0 | 0 | 413 | 2,778,000 | 343 | 6,353,000 | 756 | 9,131,000 |
| ದುರ್ಬಲತೆ ಪಿಂಚಣಿ | 0 | 0 | 5 | 731,000 | 6 | 877,000 | 11 | 1,608,000 |
| ಅನಿಲ ಭಾಗ್ಯ | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | | | | 0 | 660,000,000 | 0 | 660,000,000 |
| ಶ್ರಮ ಸಾಮರ್ಥ್ಯ ಯೋಜನೆ | ವಸತಿ ಇಲಾಖೆಯ ಕಾರ್ನಿಕ್ ಸಂಸ್ಥೆಗೆ ಮುಂಗಡ ಹಣ ಬಿಡುಗಡೆ ಮಾಡಲಾಗಿದೆ | | | | 0 | 83,995,481 | 0 | 83,995,481 |
| ಬಿಎಂಟಿಸಿ ಬಸ್‌ಪಾಸ್ ಸೌಲಭ್ಯ | ಬಿಎಂಟಿಸಿ ಸಂಸ್ಥೆಗೆ ಮುಂಗಡ ಹಣ ಬಿಡುಗಡೆ ಮಾಡಲಾಗಿದೆ | | | | 0 | 52,479,000 | 0 | 52,479,000 |
| ಒಟ್ಟು | 45,603 | 43,43,89,408 | 92,508 | 93,48,22,732 | 92,498 | 101,95,97,328 | 2,30,609 | 319,54,03,973 |

# ಅನುಬಂಧ–3

1. ದರ್ಜಿಗಳು
2. ದೋಬಿಗಳು
3. ಹಮಾಲಿಗಳು
4. ಹೋಟೆಲ್ ಕಾರ್ಮಿಕರು
5. ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಹಕರು
6. ಆಟೋಮೊಬೈಲ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು
7. ಗೃಹ ಕಾರ್ಮಿಕರು
8. ಕೃಷಿ/ತೋಟಗಾರಿಕೆ/ಹೈನುಗಾರಿಕೆ ಕೆಲಸಗಳಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
9. ನಾರಿನ ಉದ್ದಿಮೆಯಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
10. ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು
11. ಮೀನುಗಾರರು
12. ಕುಂಬಾರರು
13. ಚಮ್ಮಾರರು
14. ಕ್ಷೌರಿಕರು
15. ಕಸಾಯಿ ಖಾನೆ ಕಾರ್ಮಿಕರು
16. ಕಮ್ಮಾರರು
17. ಚಿನಿವಾರರು/ಅಕ್ಕಸಾಲಿಗರು
18. ಮನೆಗಳಲ್ಲಿ ಬೀಡಿ ಕಟ್ಟುವವರು
19. ಮನೆಗಳಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು
20. ಶಿಲ್ಪಕಾರರು/ ಹಸ್ತ ಕುಶಲ ಕಾರ್ಮಿಕರು
21. ಚಿತ್ರ ಬಿಡಿಸುವವರು
22. ಬಿದಿರಿನ ವಸ್ತುಗಳನ್ನು ತಯಾರು ಮಾಡುವವರು
23. ಖಾದ್ಯ ತೈಲ/ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು.
24. ಟಿಂಬರ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
25. ರೇಷ್ಮೆ ಕಾರ್ಮಿಕರು
26. ಕಾಟನ್ ಗಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವಕಾರ್ಮಿಕರು
27. ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
28. ಕಲ್ಲು ಒಡೆಯುವಕಾರ್ಮಿಕರು
29. ಚರ್ಮ ಹದ ಮಾಡುವ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
30. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು
31. ಬೀದಿ ಬದಿಯ ಮಾರಾಟಗಾರರು

32. ಚಾಲಕರು/ನಿರ್ವಾಹಕರು/ಸಹಾಯಕರು/ ಕ್ಲೀನರ್‌ಗಳು/ಗಾಡಿ ಎಳೆಯುವವರು/ರಿಕ್ಷಾ ವಾಲಾಗಳು/ ಟಾಂಗಾವಾಲಾಗಳು.
33. ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
34. ಚಿಂದಿ ಆಯುವವರು
35. ಅಡಿಗೆ ಕೆಲಸಗಾರರು/ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು/ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು
36. ಸಫಾಯಿ ಕರ್ಮಚಾರಿಗಳು
37. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು
38. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ/ವಾಚ್‌ಮೆನ್‌ಗಳು
39. ಪೋರ್ಟರ್
40. ಪ್ರವಾಸಿ ಗೈಡ್‌ಗಳು
41. ಮಂಡಕ್ಕಿ ಭಟ್ಟಿ ಕಾರ್ಮಿಕರು
42. ಛಾಯಾವೃತ್ತಿ ಕಾರ್ಮಿಕರು
43. ಇತರೆ ವರ್ಗ(ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(l) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು)

## ಅನುಬಂಧ-4

### ಹೊಸದಾಗಿ ಸೇರಿಸಬೇಕಾದ ಅಸಂಘಟಿತ ಕಾರ್ಮಿಕ ವಲಯಗಳ ಪಟ್ಟಿ

1. ಕೃಷಿ ಉಪಕರಣಗಳ ತಯಾರಿಸುವುದು
2. ಬೇಕರಿ ಕೆಲಸ
3. ವಾದ್ಯ ನುಡಿಸುವುದು
4. ಬಳೆಗಳನ್ನು ತಯಾರಿಸುವುದು
5. ಮಣಿಗಳ ತಯಾರಿಕೆ ಮತ್ತು ಪೋಣಿಸುವುದು
6. ಬ್ಯೂಟಿಷಿಯನ್
7. ಬೀಡಿ ತಯಾರಿಕೆಗೆ ಸಂಬಂಧಪಟ್ಟ ಎಲ್ಲಾ ಕೆಲಸ
8. ಸೈಕಲ್ ರಿಪೇರಿ ಮಾಡುವುದು
9. ಬಿಂದಿ ತಯಾರಿಕೆ
10. ದೋಣಿ ನಡೆಸುವುದು
11. ಬುಕ್ ಬೈಂಡಿಂಗ್ ಮಾಡುವುದು
12. ಸಣ್ಣ ಪ್ರಮಾಣದಲ್ಲಿ ಇಟ್ಟಿಗೆ ಮತ್ತು ಹೆಂಚು ತಯಾರಿಕೆ
13. ಬ್ರಶ್ (ಕುಂಚ) ತಯಾರಿಕೆ
14. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು
15. ಕೇಬಲ್ ಟಿ.ವಿ ಕಾರ್ಮಿಕರು
16. ಬಡಗಿ ಕೆಲಸ / ಮರಗೆಲಸ
17. ನೆಲಹಾಸು ಹೆಣೆಯುವುದು
18. ಗೋಡಂಬಿ ಸಂಸ್ಕರಣೆ
19. ನೀರಾ ಇಳಿಸುವವರು
20. ಗಾರ್ಮೆಂಟ್ಸ್ ನೌಕರರು(ಇಎಸ್ಐ,, ಪಿ.ಎಫ್ ಸೌಲಭ್ಯ ಪಡೆಯದೇ ಇರುವವರು)
21. ಕುಸುರಿ ಕೆಲಸ
22. ಸಿನಿ ಸೇವೆ
23. ಬಟ್ಟೆ ಮುದ್ರಣ
24. ಕ್ಲಬ್ ಮತ್ತು ಕ್ಯಾಂಟೀನ್ ಸೇವೆ
25. ಸಿಹಿಪದಾರ್ಥಗಳ / ಖಾರ ಪದಾರ್ಥಗಳ ತಯಾರಿಕೆ
26. ಕಲ್ಯಾಣ ಮಂಟಪ/ಸಭಾ ಭವನ/ಟೆಂಟ್/ಪೆಂಡಾಲ್ ಗಳಲ್ಲಿನ ಎಲ್ಲ ಕೆಲಸ
27. ಕೊರಿಯರ್ ಸೇವೆ
28. ಡಾಟಾ ಎಂಟ್ರಿ ಆಪರೇಟರ್ / ಟೈಪಿಸ್ಟ್
29. ಪೆಟ್ರೋಲಿಯಂ ಉತ್ಪನ್ನಗಳ ವಿತರಣೆ

30. ಡೈಯಿಂಗ್ ಕೆಲಸ
31. ವಿದ್ಯುನ್ಮಾನ ಮತ್ತು ವಿದ್ಯುತ್ ಸರುಕುಗಳ ರಿಪೇರಿ
32. ವಿದ್ಯುಲ್ಲೇಪನ
33. ಕಸೂತಿ ಕೆಲಸ
34. ಎನ್ವಲಪ್ ತಯಾರಿಕೆ
35. ಪಟಾಕಿಗಳ ತಯಾರಿಕೆ
36. ಹೂವಿನ ಕೆಲಸ ಮತ್ತು ಹಾರಗಳ ತಯಾರಿಕೆ
37. ಫೌಂಡ್ರಿ (ಎರಕಗಾರಿಕೆ)
38. ಉದ್ಯಾನವನಗಳ ನಿರ್ವಹಣೆ
39. ಜೆಮ್ ಕಟಿಂಗ್ (ಮುತ್ತು–ರತ್ನ ಕತ್ತರಿಸುವಿಕೆ)
40. ಗಾಜಿನ ವಸ್ತುಗಳ ತಯಾರಿಕೆ
41. ಆರೋಗ್ಯ ಸೇವೆಗಳು
42. ಜೇನು ಸಂಗ್ರಹಣೆ
43. ಬೀಗಗಳ ತಯಾರಿಕೆ / ರಿಪೇರಿ
44. ಬೆಂಕಿಪೊಟ್ಟಣ ತಯಾರಿಕೆ
45. ಸಣ್ಣ ಪ್ರಮಾಣದ ಅರಣ್ಯ ಉತ್ಪನ್ನಗಳ ಸಂಗ್ರಹಣೆ
46. ದಿನಪತ್ರಿಕೆ ಮಾರುವುದು
47. ಸರ್ಕಾರೇತರ ಸಂಸ್ಥೆಗಳ ಸೇವೆ
48. ಪ್ಯಾಕಿಂಗ್ ಮತ್ತು ಪ್ಯಾಕೇಜಿಂಗ್
49. ಪಾನ್ ಬೀಡಾ ವ್ಯಾಪಾರ
50. ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ
51. ಕಲ್ಲು ಗಣಿ / ಕ್ವಾರಿ ಕೆಲಸ
52. ಗಿರಣಿ
53. ಉಪ್ಪು ಕಾಗದ ತಯಾರಿಕೆ
54. ಮರಳುಗಾರಿಕೆ
55. ಪೌರ ಕಾರ್ಮಿಕರು
56. ಕುರಿ ಸಾಕುವುದು
57. ಅಂಗಡಿ & ವಾಣಿಜ್ಯ ಸಂಸ್ಥೆಗಳ ಕೆಲಸ
58. ಸಣ್ಣ ಕೈಗಾರಿಕೆ / ಗೃಹ ಕೈಗಾರಿಕೆ
59. ಸಾಬೂನು ತಯಾರಿಸುವುದು
60. ಕ್ರೀಡಾ ಸಾಮಾಗ್ರಿಗಳ ತಯಾರಿಕೆ
61. ಸ್ಟೀಲ್ ಹಾಗೂ ಇತರೆ ಲೋಹಗಳ ಪಾತ್ರೆ ಹಾಗೂ ಇತರೆ ಗೃಹೋಪಯೋಗಿ ವಸ್ತುಗಳ ತಯಾರಿಕೆ
62. ಕಸ ಗುಡಿಸುವುದು

63. ಚರ್ಮದ ಉತ್ಪನ್ನಗಳ ತಯಾರಿಕೆ
64. ಟೆಲಿಫೋನ್ ಭೂತ್ ಸೇವೆ
65. ಹೊಗೆಸೊಪ್ಪು ಸಂಸ್ಕರಣೆ
66. ಆಟಿಕೆ ತಯಾರಿಕೆ
67. ಸಾರಿಗೆ ಸೇವೆ (ಚಾಲನೆ / ಕ್ಲೀನಿಂಗ್ ಸೇವೆ)
68. ಲೋಹಗಳ ಬೆಸುಗೆ
69. ಪೆಟ್ರೋಲ್ ಬಂಕ್ / ಗ್ಯಾಸ್ ಬಂಕ್ ಕಾರ್ಮಿಕರು
70. ಪಾರ್ಕಿಂಗ್ ಸ್ಥಳದಲ್ಲಿ ಶುಲ್ಕ ವಸೂಲಿ ಮಾಡುವುದು
71. ಮೇಣದ ಬತ್ತಿ ತಯಾರಿಕೆ
72. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು
73. ಗ್ಯಾಸ್ ಸಿಲೆಂಡರ್ ವಿತರಣೆ ಮಾಡುವವರು
74. ತೆಂಗಿನ ಕಾಯಿ/ ಅಡಿಕೆ ಸುಲಿಯುವ ಕಾರ್ಮಿಕರು
75. ಸರ್ಕಸ್ ಕಂಪನಿಯ ಕಾರ್ಮಿಕರು
76. ಹೋಮ್ ಸ್ಟೇ ಮತ್ತು ರೆಸಾರ್ಟ್‌ಗಳಲ್ಲಿ ಕೆಲಸ ಮಾಡುವವರು
77. ಗಾದಿ ತಯಾರಿಕೆ
78. ಬೀದಿ ಬದಿ ಮಡಿಕೆ/ ಹೂಜಿ ಹಾಗೂ ಇತರೆ ಅಲಂಕಾರಿಕ ವಸ್ತುಗಳ ಮಾರಾಟ
79. ಬಸ್ಸು/ ರೈಲುಗಳಲ್ಲಿ ತಿಂಡಿ/ ಚಹಾ ಮಾರಾಟ
80. ಖಾಸಗಿ ಬಸ್ ನಿಲ್ದಾಣಗಳಲ್ಲಿ ಏಜೆಂಟ್‌ರಾಗಿ ಕೆಲಸ ಮಾಡುವವರು
81. ಐಸ್ ಕ್ರೀಂ ಮಾರಾಟ
82. ಕೊಡೆ ರಿಪೇರಿ
83. ಎಲ್ಲಾ ರೀತಿಯ ತರಬೇತಿ ನೀಡುವವರು
84. ದನಗಳಿಗೆ ಲಾಯ ಕಟ್ಟುವುದು ಹಾಗೂ ಕೊಂಬು ಪಾಲಿಷ್ ಮಾಡುವುದು
85. ಹಳೆ ಪೇಪರ್ ಖರೀದಿ
86. ಹಾಲು ವ್ಯಾಪಾರ
87. ಕೂದಲು ಸಂಗ್ರಹಣೆ ಮಾಡುವವರು
88. ಸ್ಥಳೀಯ ಸಂಸ್ಥೆಗಳ ಖಾಯಂ ಅಲ್ಲದ ಕಾರ್ಮಿಕರು(ಹೊರಗುತ್ತಿಗೆ ಸಿಬ್ಬಂದಿ ಹೊರತುಪಡಿಸಿ)
89. ದನಗಾಹಿಗಳು
90. ಮುಜರಾಯಿ ಇಲಾಖೆಯ ವ್ಯಾಪ್ತಿಯಿಂದ ಹೊರತುಪಡಿಸಿದ ಇತರೆ ಧಾರ್ಮಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವವರು
91. ಆರ್ಕೆಸ್ಟ್ರಾ ಕಾರ್ಮಿಕರು
92. ಸ್ಟೋವ್/ ಗ್ಯಾಸ್ ಒಲೆ ರಿಪೇರಿ
93. ಸಾಣೆ ಹಿಡಿಯುವವರು
94. ಬಳೆ ಮಾರುವವರು

95. ಬೆಲ್ಲ ತಯಾರಿಕೆ

96. ಕುರಿಗಳ ಉಣ್ಣೆ ಕತ್ತರಿಸುವವರು

97. ದೇವದಾಸಿಯರು

98. ಕುರಿಗಳ ಉಣ್ಣೆಯಿಂದ ಕಂಬಳಿ ನೇಯುವವರು

99. ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುವ ಶಿಕ್ಷಕರು ಹಾಗೂ ಅಥಿತಿ ಉಪನ್ಯಾಸಕರು

100. ಕೂದಲನ್ನು ಸ್ವಚ್ಛಗೊಳಿಸಿ ಅಳತೆವಾರು ವಿಂಗಡಣೆ ಮಾಡುವ ಕೆಲಸ.

101. ನಿರ್ದಿಷ್ಟವಲ್ಲದ ಕೆಲಸಗಳಲ್ಲಿ ದೈಹಿಕ ಶ್ರಮ.